ನೋಟಿಸ್.

1904ನೆ ಇಸವಿ ಜುಲೈ 14ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 428—429ನೆ ಪುಟನಲ್ಲಿ ಹಾಸನ ಡಿಸ್ಟ್ರಿಕ್ಟ್ 1904—05ನೆ ಸಾಲಿನ ಮೈನರ್ ಫಾರೆಸ್ಟ್ ಪ್ರಾಡ್ಯೂಸ್ ಹರಾಜ್ ವಿಚಾರದ ನೋಟಿಫಿಕೇಷನ್ ಫಾಯಿಷ್ ಮಾಡಿರುತ್ತೆ ಎಲ್ಲಾ ಜನಗಳಿಗೂ ತಿಳಿಯತಕ್ಕದ್ದು.

ವೈ. ಸೀತಾರಾಮಯ್ಯ,
ಫಾರೆ ಡೆಪ್ಯುಟಿ ಕನಿಸೆಷನರ್, ಹಾಸನದ ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 22ನೆ ಜೂನ್ 1904ನೆ ಇಸವಿ.

ಮೊರ್ಜನ್ನಲ್ಲಿ ನಮೂದು ಮಾಡಿ ಇರತಕ್ಕ ಮೂಲೂರು ತಾಲ್ಲೂಕಿಗೆ ಸೇರಿದ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 12ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ದೊಮ್ಮಲೂರು—ಲಕ್ಕೂರು ಹೋಬಳಿ.
2. ಜಹಗೀರುಪುರ—ಮಾಲೂರು ಹೋಬಳಿ.
3. ಜಹಗೀರು ಯರ್ರಪ್ಪನಹಳ್ಳಿ—ಮಾಲೂರು ಹೋಬಳಿ.

(ಹೆಚ್ಚು ತಫಸೀಲ್ ಬಗ್ಗೆ ತಾರೀಖು 7—7—1904ನೆ ಮಲ್ಕುಂ 27ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 418—419—420ನೆ ನಂಬರ್ ಪೇಜುಗಳು ನೋಡತಕ್ಕದ್ದು.)

ತಾರೀಖು 4ನೆ ಜುಲೈ 1904ನೆ ಇಸವಿ.

ಮೊರ್ಜನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು ಸದರಿ ಇನಾಂ ದಾರ್ರುಗಳಿಂದ ಬರಬೇಕಾದ ಬಾಕಿ ವೊಬಲಗಿಗೋಸ್ಕರ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 30ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ಬೊಮ್ಮೇನಹಳ್ಳಿ, ಕಸಬಾ ಹೋಬಳಿ ಚಿಕ್ಕಬಳ್ಳಾಪುರದ ತಾಲ್ಲೂಕು.
2. ಖಾಯಂಗುತ್ತಾ ದಾಸರೇನಹಳ್ಳಿ, ಹೊಸೂರು ಹೋಬಳಿ ಗೌರೀಬಿದನೂರು ತಾ||

(ಹೆಚ್ಚು ತಫಸೀಲ್ ಬಗ್ಗೆ 14—7—1904ನೆ ಮಲ್ಕುಂ 28 ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 430—431ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 7ನೆ ಜುಲೈ 1904ನೆ ಇಸವಿ.

ಮೊರ್ಜನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ವೊಬಲಗಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 30ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಖಾಯಂಗುತ್ತಾ ವೀರೇನಹಳ್ಳಿ-ವೇಮಗಲ್ ಹೋಬಳಿ, ಕೋಲಾರ ತಾಲ್ಲೂಕು.
2. ಜೋಡಿ ಬೆಸ್ತರಹಳ್ಳಿ-ಪಾತಪಾಳ್ಯ ಹೋಬಳಿ, ಬಾಗೆಪಲ್ಲಿ ತಾಲ್ಲೂಕು.

(ಹೆಚ್ಚು ತಫಸೀಲ್ ಬಗ್ಗೆ 14—7—1904ನೆ ಮಲ್ಕುಂ 28ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 432—433ನೆ ನಂಬರ್ ಪೇಜು ನೋಡತಕ್ಕದ್ದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷ್ಷನರ್.

1904ನೆ ಇಸವಿ ಜೂನ್ ಮಾಹೆ 30ನೆ ತಾ|| ಗುರುವಾರ ಕೋಲಾರ ಡಿ|| ಬೋರ್ಡು ಮೆಂಬರುಗಳು ಕೋಲಾರದಲ್ಲಿ ಮೀಟಿಂಗು ಮಾಡಿ ನಡಿಸಿದ ನಡವಳಿಕೆಗಳ ತೀರ್ಮಾನಗಳು.

ಹಾಜರು.

ಎಕ್ಸ್ ಆಫಿಷಿಯೋ ಮೆಂಬರುಗಳು.

1. ಡೆಪ್ಯುಟಿ ಕಮಿಷನರ್ ಮತ್ತು ಪ್ರೆಸಿಡೆಂಟರವರು.
2. ಎಗ್ಜಿಕ್ಯೂಟಿವ್ ಇಂಜನೀಯರವರು.
3. ಡಿ|| ಟ್ರೆಜರಿ ಫಾರ್ಜ್ ಆಫಿಸರು ಮತ್ತು ವೈಸ್ ಪ್ರೆಸಿಡೆಂಟರವರು.
4. ಡಿ|| ಮೆಡಿಕಲ್ ಆಫಿಸರವರು.
5. ಸ್ಕೂಲುಗಳ ಡಿ|| ಇನ್ಸ್ಪೆಕ್ಟರವರು.

ನಾರ್ ಆಫಿಷಿಯಲ್ ಮೆಂಬರುಗಳು.

1. ಮ|| ರಾ|| ಮುನಿನಾರಾಯಣ ಶೆಟ್ಟರವರು, ಕೋಲಾರ.
2. ,, ಉಮ್ಮತ್ತೂರಯ್ಯನವರು, ಬವರಿಂಗ್‌ಪೇಟೆ.
3. ,, ರಾಮರಾಯರು, ಮಾಲೂರು.

4. ಮು॥ ರಾ॥ ಮರಸ್ವಪಲ್ಲಿ ಚಿನ್ನಪ್ಪನವರು, ಶ್ರೀನಿವಾಸಪುರ.
5. ,, ದೊಂತ್ತಿ ಚಿಕ್ಕ ಸುಬ್ರಾಯಪ್ಪನವರು, ಶಿಡ್ಲಘಟ್ಟ.
6. ,, ವೆಂಕಟಪ್ಪನವರು, ಬಾಗೇಪಲ್ಲಿ.
7. ,, ಕಾಷ್ಟ ಜೈವರ್ ಸಾಬರು, ಮುಳಬಾಗಿಲ್.
8. ,, ರಾಮಂಣನವರು, ಗೋರಿಬಿದನೂರು.
9 ,, ಲಕ್ಷ್ಮಣರಾಯರವರು, ಗುಡಿಬಂಡ.
10. ,, ಅಪ್ಪಾಜಿ ರಡ್ಡಿಯವರು, ಚಿಂತಾಮಣಿ.
11. ,, ಭೂಸವೆಗೌಡರವರು, ಬೆವರಂಗಪೇಟೆ.
12. ,, ವೆಂಕಟಸಾಮಿ ರಡ್ಡಿಯವರು, ಶ್ರೀನಿವಾಸಪುರ.
13. ,, ಪ್ರ. ಶ್ರೀನಿವಾಸಾಚಾರರು), ಶಿಡ್ಲಘಟ್ಟ.
14. ,, ವೆಂಕಟರಡ್ಡಿಯವರು, ಬಾಗೇಪಲ್ಲಿ.
15. ,, ಗೌಡಗೆರೆ ಕೃಷ್ಣಾಚಾರ್ಯರವರು, ಗೋರಿಬಿದನೂರು.

ಗೈರು ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫೀಸರವರು.
2. ಚಿಂತಾಮಣಿ ಡಿವಿಜ್ ಆ॥ ಕವಿಾಷನರವರು.
3. ಮೊಲೂರು ಡಿವಿಜ್ ಡಿಟೋ

ನ್ಯೂ ಅಫಿಷಿಯಲ್ ಮೆಂಬರುಗಳು.

1. ಮು॥ ರಾ॥ ನಾರಾಯಣಸಾಮಿ ಶೆಟ್ಟಿಯವರು, ಚಿಕ್ಕಬಳ್ಳಾಪುರ.
2. ,, ಸೂರನಾರಣಪ್ಪ, ಚಿಂತಾಮಣಿ.

1. 1904ನೆ ಮಾರ್ಚ್ ಮಾಹ 29ನೆ ತಾರೀಖಿನಲ್ಲಿ ನಡೆದ ಮೀಟಂಗಿನ ತೀರ್ಮಾನಗಳನ್ನು ಓದಲಾಯಿತು.

ತೀರ್ಮಾನ :—ಖಾಯಂ ಮಾಡಲ್ಪಟ್ಟಿತು.

2. 1903ನೆ ಅಕ್ಟೋಬರ್ ಮಾಹೆ ಲಾಗಾಯಿತು 1904ನೆ ಇಸವಿ ಮಾರ್ಚಿ ಆಖೈರು ವರಿಗಿನ ಡಿ॥ ಫಂಡು ಜಮಾಖರ್ಚು ಲೆಖ್ಕಗಳು ಕಂಟ್ರೋಲರ್ ಆಫೀಸಿನಿಂದ ಆಡ್ಜೆಸ್ಟ್ ಆಗಿ ಬಂದದ್ದು ಓದಲಾಯಿತು.

ತೀರ್ಮಾನ :—ರಿಕಾರ್ಡು ಮಾಡಲ್ಪಟ್ಟಿತು.

3. 1904ನೆ ಇಸವಿ ಏಪ್ರಿಲ್ ಮಾಹೆ 8ನೆ ತಾರೀಖಿನ 3878-85—L. F. 109-03ನೆ ನಂ. ಗೌರ್ನಮೆಂಟ್ ಪ್ರೊಸೀಡಿಂಗ್ಸು ವಿಲೇಜ್ ಯೂನಿಯರ್ಗಳಲ್ಲಿ ಮನೆ ಕಂದಾಯವನ್ನು ಮನೆಗಳ ಕಿಪ್ಯತ್ತಿನ ಜೋಟಿ ವಸೂಲ್ಮಾಡಲು ಮತ್ತು ಈ ವಿಷಯದಲ್ಲಿ ಜೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂದು ಬಂದಿದ್ದ ಆರ್ಡರು ಓದಲಾಯಿತು.

ತೀರ್ಮಾನ :—ಜೋರ್ಡಿನವರು ಈ ವಿಷಯವನ್ನು ಕುರಿತು ಚೆನ್ನಾಗಿ ಚರ್ಚೆಮಾಡಿ ಕೊನೆಗೆ ಗೌರ್ನಮೆಂಟ್ ಪ್ರೊಸೀಡಿಂಗ್ಸುನಲ್ಲಿ ನಮೂದಿಸಿರುವ ಮನೆ ಕಂದಾಯದ ದರಗಳು ಬಹಳ ಸರಿಯಾಗಿವೆ ಇದೇ ದರಗಳ ಮೇರಿಗೆ ಇನ್ನು ಮುಂದೆ ಈ ಡಿಸ್ಟ್ರಿಕ್ಟಿನಲ್ಲಿ ಏರ್ಪಾಟಾಗುವ ಎಲ್ಲಾ ಯೂನಿಯರ್ಗಳಲ್ಲೂ ಮನೆ ಕಂದಾಯ ವಸೂಲು ಮಾಡಬಹುದೆಂದು ತೀರ್ಮಾನ ಮಾಡಿದರು.

4. 1904ನೆ ಜೂನ್ 11ನೆ ತಾ॥, ಸೀನಿಯರ್ ಸರ್ಜರವರ ಹಾಕೆಟ್ ಡಿ॥ ಆ॥ ನಲ್ಲಿರುವ ಪ್ಲೇಗು ಕ್ಲಾರ್ಕು ಸಂಬಳ ಡಿ॥ ಫಂಡು ಮತ್ತು ಮುನಿಸಿಪಲ್ ಫಂಡ್ಗುಗಳಿಂದ ಕೊಡಬೇಕಾದ್ದು ವಿಷಯವಲ್ಲಿ ರಿಪೋರ್ಟು ಮಾಡಬೇಕೆಂದು ಬಂದದ್ದು ಓದಲಾಯಿತು.

ತೀರ್ಮಾನ :—ಜೋರ್ಡಿನವರು ಈ ಪ್ಲೇಗು ಕ್ಲಾರ್ಕು ನೌಕರಿ ಅವಶ್ಯಕವಾದದ್ದು, ಆದರೆ ಆತನ ಸಂಬಳದ ಪೈಕಿ ಯಾವ ಭಾಗವನ್ನೂ ಕೊಡಲು ಅನುಕೂಲಿಸುವದಿಲ್ಲವೆಂದು ತೀರ್ಮಾನಿಸಿದರು.

5. ಬವರಿಂಗ್‌ಪೇಟೆಯಲ್ಲಿರುವ ಡಿಸ್ಪೆನ್ಸರಿ ಕಟ್ಟಡದ ಸುತ್ತಲೂ ಕಾಂಪೌಂಡುಗಾಗಿ ತಂತಿಗಳು ಹಾಕುವ ವಿಷಯದಲ್ಲಿ ಸೀನಿಯರ್ ಸರ್ಜ್ ಸಾಹೇಬರವರಿಂದ ತಲುಪಿದ 16—5—04ನೆ ಮು॥ 5178ನೆ ನಂಬರ್ ಚಾಕೆಟ್ ಓದಲಾಯಿತು.

ತೀರ್ಮಾನ :—ಮೇಲಿನ ಕಾಂಗಾರಿಗೆ ತಗಲುವ ಮೊಬಲಗು ಪೈಕಿ ದಾವಾಪಾಯೆ $\frac{1}{3}$ ಭಾಗ ಡಿ॥ ಜೋರ್ಡಿನಿಂದ ಕೊಡಲು ಒಪ್ಪಿರುತ್ತಾರೆ.

6. ಮುಳಬಾಗಲ್ ಟೌನಲ್ಲಿ ಪ್ರಯಾಣೀಕರಿಗೆ ಸರಿಯಾದ ತಂಗುವ ಸ್ಥಳ ಇಲ್ಲದ್ದರಿಂದ ಹಳ್ಳೀ ತಾಲ್ಲೂಕು ಕಚೇರಿಯ ಸ್ಥಳ ಡಿ॥ ಫಂಡಿನಿಂದ ರಿಪೇರಿ ಮಾಡಿಸಿ ಮುನಾಫರಿ ಖಾನೆಯಾಗಿ ಉಪಯೋಗಿಸಿಕೊಳ್ಳಬೇಕೆಂದು ಮೂಲೂರು ಡಿವಿಜ್ ಆ॥ ಕ್ಟ॥ ರವರು ಬರದ 8—5—04ನೆ ಮಕ್ತುಂ 870ನೆ ನಂ. ಯಾದಿ ಓದಲಾಯಿತು.

ತೀರ್ಮಾನ :—500 ರೂಪಾಯಿಗೆ ಮಿಾರದಂತೆ ಈ ಕಟ್ಟಡಕ್ಕೆ ರಿಪೇರಿ ಮಾಡಿಸಬಹುದೆಂತ ತೀರ್ಮಾವಾಯಿತು.

7. ಬಾಗೇಪಲ್ಲಿ ತಾಲ್ಲೂಕು ಗೂಳೂರು ದೊಡ್ಡಕೆರೆ ಕಟ್ಟೆ ಅಗಲಪಡಿಸುವದಕ್ಕೆ ಮುಂಣು ಕಾಂಗಾರಿ ಪೈಕಿ ಕೊಂಚ ಮೊಬಲಗು, ಅದರಮೇಲೆ ಡಿ॥ ಫಂಡು ರಸ್ತೆ ಹೋಗುವದರಿಂದ, ಡಿ॥ ಫಂಡಿನಿಂದ ಕೊಡಬೇಕಾಗುತ್ತೆ. ಇದಕ್ಕೆ ಬೋರ್ಡಿನವರು ಒಪ್ಪುತ್ತಾರೆಯೇ ಎಂದು ವಗ್ಗೈರೆ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತಲಪಿದ 18—5—04ನೆ ಮು॥ 272ನೆ ನಂ. ಡಾಕೆಟ್ ಓದಲಾಯಿತು.

ತೀರ್ಮಾನ:—ಬೋರ್ಡಿನವರು ಈ ಕೆರೆ ಕಟ್ಟೆಯನ್ನು ಅಗಲಪಡಿಸುವದಕ್ಕಾಗಿ 1,000 ರೂಪಾಯಿಗೆ ಮಿಾರದಂತೆ ಕೊಡುವದಾಗಿ ಒಪ್ಪಿರುತ್ತಾರೆ.

8. ಬರುವ ದಸರಾ ಅಸೆಂಬ್ಲಿಗೆ ಡಿ॥ ಬೋರ್ಡು ನಾ॥ ಅಫಿಷಿಯಲ್ ಮೆಂಬರುಗಳ ಪೈಕಿ ಇಬ್ಬರನ್ನು ಚುನಾಯಿಸಬೇಕೆಂದು ಹ॥ ಡಿ॥ ಕ॥ ಸಾಹೇಬರವರ 7—6—04ನೆ ಮು॥ 5677—4653ನೆ ನಂ. ಡಾಕೆಟ್ ಓದಲಾಯಿತು.

ತೀರ್ಮಾನ:—1904ನೆ ಇಸವಿ ದಸರಾ ಅಸೆಂಬ್ಲಿಗೆ ಹೋಗಲು ಮು॥ ಶ್ರೀ॥ ಪಿ. ಶ್ರೀನಿವಾಸಾಚಾರ್ಯರವರು, ಮು॥ ಶ್ರೀ॥ ಕ. ಉ ವ್ಯಂಕಣ್ಣಯ್ಯನವರು ಚುನಾಯಿಸಲ್ಪಟ್ಟರು.

9. ಶ್ರೀನಿವಾಸಪುರ ತಾಲ್ಲೂಕು ರಾಯಲ್‌ಪಾಡು ವಗ್ಗೈರೆ ಗ್ರಾಮಗಳಲ್ಲಿ ಜನಗಳ ಉಪಯೋಗಾರ್ಥವಾಗಿ ಒಬ್ಬ ನೇಟಿವ್ ವೈದ್ಯನನ್ನು ವೊಕರರು ಆಗಬೇಕೆಂದು ಮು॥ ಶ್ರೀ॥ ಕ. ವೆಂಕಟಸಾಮಿ ರಡ್ಡಿಯವರಿಂದ ಪ್ರೊಪೋಜು ಮಾಡಲ್ಪಟ್ಟಿತು ಮು॥ಶ್ರೀ॥ ಮುರನನಪಲ್ಲಿ ಚಿನ್ನಪ್ಪನವರಿಂದ ಸೆಕಂಡು ಮಾಡಲ್ಪಟ್ಟಿತು.

ಸಭೆಯವರೆಲ್ಲಾ ಏಕಮನಸ್ಕರಾಗಿ ಶ್ರೀನಿವಾಸಪುರಕ್ಕೆ ದೂರವಾಗಿರುವ ಉತ್ತರಭಾಗದಲ್ಲಿರತಕ್ಕ ಗ್ರಾಮಗಳಲ್ಲಿ ಕಾಮಿಲೆ ಜನಗಳನ್ನು ನೋಡಿಕೊಳ್ಳುವದಕ್ಕೋಸ್ಕರ ರಾಯಲ್ಪಾಡಿನಲ್ಲಿ ಒಬ್ಬ ನೇಟಿವ್ ವೈದ್ಯನನ್ನು ಇಡಬಹುದೆಂದು ತೀರ್ಮಾನಿಸಿದರು.

10. ಕೋಲಾರ ಡಿ॥ ಬೋರ್ಡು ಫೈನಾನ್ಸು ಕಮ್ಮಿಟಿಯವರು 22—5—04ನೆ ಮು॥ ಸಭೆ ಸೇರಿ ನಡಿಸಿದ ತೀರ್ಮಾನವನ್ನು ಮತ್ತು ಅವರಿಂದ ಮಾಡಲ್ಪಟ್ಟ 1904—05ನೆ ಸಾಲಿನ ಡಿ॥ ಬೋರ್ಡು ಬಜ್ಜೆಟ್ಟು ಓದಲಾಯಿತು.

ತೀರ್ಮಾನ:—ಫೈನಾನ್ಸು ಕಮ್ಮಿಟಿಯವರಿಂದ ಮಾಡಲ್ಪಟ್ಟ ಬಜ್ಜೆಟ್ಟು ಅಂದಾಜುಗಳು ಒಪ್ಪಿಕೊಳ್ಳಲ್ಪಟ್ಟಿತು. ಅದರಲ್ಲಿ ರಾಯಲ್ಪಾಡಿನಲ್ಲಿ ಹೊಸದಾಗಿ ವೊಕರೂರು ಆಗಬೇಕೆಂದು ತೀರ್ಮಾನವಾಗಿರುವ ನೇಟಿವ್ ವೈದ್ಯನ ವೇತನ ಮತ್ತು ಸಾದಿಲ್ವಾರ್ ಮಾಹೇಯಾನಾ 15 ರೂಪಾಯಿನಂತೆ ಶೇರಿಸಬೇಕೆಂದು ತೀರ್ಮಾನವಾಗಿ ಅದರಂತೆಯೇ ಶೇರಿಸಲ್ಪಟ್ಟಿತು.

1904 - 05ನೆ ಸಾಲಿಗೆ ಅಂದಾಜಾದ ಜಮಾಖರ್ಚು ವಿವರ:—

			ರೂ. ಆ. ಪೈ.
1904—05ನೆ ಸಾಲಿನ ಪುರುನಲ್ಲಿ ಇರಬಹುದಾದ ಬಾಕಿ	..	..	20,761—0—0
1904—05ನೆ ಸಾಲಿಗೆ ಜಮಾ ಆಗಬಹುದಾದ ಅಂದಾಜು	..	..	80,819—0—0
		ಜುಮ್ಲಾ ...	1,01,580—0—0
ಡಿಟೋ ಸಾಲಿಗೆ ಖರ್ಚು ಅಂದಾಜು			
A. ಇಂಜನಿಯರ್ ಇಲಾಖಾ ಮೂರೀಫತ್ತು ಕಾಂಗಾರಿ	..	45,461-0-0	86,078—0—0
B. ರೆವಿನ್ಯು ಇಲಾಖಾ ಡಿಟೋ	...	16,092-0-0	
C. ಸಿವಿಲ್ ಛಾರ್ಜು ...	...	24,525-0-0	
1904—05 ಸಾಲಾಖ್ಯೆರಿಗೆ ನಿಲ್ಲಬಹುದಾದ ಶಿಲ್ಕು	...	..	15,502—0—0

11. ಮಿಾಟಿಂಗು ಕ್ಲೋಜು ಮಾಡುವಾಗ್ಯೆ ಮುಂದಿನ ಮಿಾಟಿಂಗು 1904ನೆ ಇಸವಿ ಸೆಪ್ಟೆಂಬರು ತಾ॥ 17ನೆ ಶನಿವಾರ ದಿವಸ ನಡಿಯಬೇಕೆಂದು ತೀರ್ಮಾನವಾಯಿತು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮಾ—ತಾರೀಖು 5ನೆ ಜುಲೈ 1904.

ಎಡತೊರೆ ತಾಲ್ಲೂಕಿಗೆ ಸೇರಿದ ಸರ್ವಮಾನ್ಯ ದಿಡ್ಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಎಡತೊರೆ ತಾಲ್ಲೂಕು ಅಮಲ್ದಾರ್‌ರವರ ಕಚೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇಧೆ.

ಹೆಚ್ಚು ತಪಶೀಲ್ ಬಗ್ಗೆ ತಾರೀಖು 14—7—1904ನೆ ಮುಕ್ತುಂ 28ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 434ನೆ ನಂಬರು ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಅಫಿಷಿಯೇಟಿಂಗ್ ಡೆಪ್ಯುಟಿ ಕವಿಷನರ್.